**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು**

**<u>ಸಿ.ಸಿ. ಸಂಖ್ಯೆ: 34/2023</u>**

| | | |
|---|---|---|
| ಫಿರ್ಯಾದುದಾರರು | : | ಜೋಗಿಗೌಡ<br>ಬಿನ್ ರಾಮೇಗೌಡ,<br>ವಯಸ್ಸು ಸುಮಾರು 37 ವರ್ಷ,<br>ವಾಸಃ ತಿಪ್ಪಲಪುರ ಗ್ರಾಮ,<br>ಬಿಳಿಕೆರೆ ಹೋಬಳಿ<br>ಗಾವಡಗೆರೆ ಹೋಬಳಿ,<br>ಹುಣಸೂರು ತಾಲ್ಲೂಕು. |
| | | ವಿರುದ್ಧ, |
| ಆರೋಪಿ/ಗಳು | : | ನಾಗೇಗೌಡ<br>ಬಿನ್ ನಿಂಗೇಗೌಡ,<br>ವಯಸ್ಸು ಸುಮಾರು 39 ವರ್ಷ,<br>ವಾಸಃ ಹೆಗ್ಗಂದೂರು ಗ್ರಾಮ,<br>ಹನಗೋಡು ಹೋಬಳಿ,<br>ಹುಣಸೂರು ತಾಲ್ಲೂಕು,<br>ಮೈಸೂರು ಜಿಲ್ಲೆ. |

**<u>ಆಪಾದನೆ</u>**

ಶ್ರೀಮತಿ ನಮ್ರತಾ ಎಸ್. ಹೊಸಮಠ, ಬಿ.ಎ., ಎಲ್.ಎಲ್.ಬಿ., ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ

ಆರೋಪಿಯಾದ ನೀವು ಫಿರ್ಯಾದುದಾರರಿಗೆ ಕೊಡಬೇಕಾದ ಸಾಲದ ಬಾಬ್ತಿಗೆ ದಿಃ17.02.2022 ಇರುವ ರೂ.75,000/- ದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹುಣಸೂರು ಶಾಖೆ ಇಲ್ಲಿಗೆ ಸೇರಿದ ಚೆಕ್ ಸಂಖ್ಯೆ - 689693 ಅನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್, ಹುಣಸೂರು ಶಾಖೆ ಇಲ್ಲಿಗೆ ನಗದೀಕರಣಕ್ಕಾಗಿ

ಹಾಜರುಪಡಿಸಿದಾಗ, ಸದರಿ ಚೆಕ್ಕು **"Funds Insufficient"** ಎಂಬ ಹಿಂಬರಹದೊಂದಿಗೆ ದಿಃ 23.02.2022 ರಂದು ವಾಪಾಸಾಗಿರುತ್ತದೆ. ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 28.02.2022 ರಂದು ನೊಂದಾಯಿತ ಅಂಚೆ ಮೂಲಕ ನೊಟೀಸನ್ನು ಮೇಲೆ ತಿಳಿಸಿದ ವಿಳಾಸಕ್ಕೆ ಕಳುಹಿಸಿದ್ದು, ಸದರಿ ನೋಟೀಸ್ ದಿಃ 08.03.2023 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ಇದುವರೆವಿಗೂ ಫಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲೀ ನೀಡಿರುವುದಿಲ್ಲ. ಆದಕಾರಣ ನೀವು ಎನ್.ಐ ಆ್ಯಕ್ಟ್ ಕಲಂ **138** ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

**(ನಮ್ರುತಾ ಎಸ್. ಹೊಸಮಠ)**

ದಿನಾಂಕಃ **24.06.2025**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.